1 ನೇ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸೊರಬ

| | | | | |
|---|---|---|---|---|
| | ಸಿ ಸಿ ನಂ. 76/2024 | | | |
| | ಸಿ.ಡಬ್ಲೂಃ | 1 | ಪಿ.ಡಬ್ಲೂಃ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.06.2026 | | | |
| ಸಾಕ್ಷಿದಾರರ ಹೆಸರುಃ | ಶಿವಪ್ರಸಾದ್ ಸಿ | | | |
| ವಯಸ್ಸುಃ | 50 ವರ್ಷ, | | | |
| ಉದ್ಯೋಗಃ | ಅಬಕಾರಿ ಉಪಾಧೀಕ್ಷಕರು ಧಾರವಾಡ | | | |
| ವಾಸಸ್ಥಳಃ | ಧಾರವಾಡ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು 05.05.2021 ರಿಂದ 05.02.2025 ರ ವರೆಗೆ ಸಾಗರ ಉಪ ವಿಭಾಗದಲ್ಲಿ ಅಬಕಾರಿ ಕಛೇರಿಯಲ್ಲಿ ಅಬಕಾರಿ ಉಪ ಅಧೀಕ್ಷಕರು ಅಂತ ಕೆಲಸ ನಿರ್ವಹಿಸಿದ್ದೇನೆ.

ದಿಃ 30.09.2023 ರಂದು ಸಂಜೆ 4.00 ಗಂಟೆಗೆ ಸರ್ಕಾರಿ ವಾಹ ಕೆಎ 14 ಜಿ 1012 ರಲ್ಲಿ ಸಿಬ್ಬಂದಿಗಳಾದ ಚಾಸಾ-2 ಮತ್ತು 3 ರವರೊಂದಿಗೆ ಹಂಚಿ ಗ್ರಾಮದ ಸುತ್ತಮುತ್ತ ಗಸ್ತು ನಿರ್ವಹಿಸುತ್ತಿರುವಾಗ, ಸಂಜೆ 4.15 ಗಂಟೆಗೆ ದೂರವಾಣಿ ಮುಖಾಂತರ ಒಂದು ಮಾಹಿತಿ ಬಂದಿದ್ದು, ಅದರಲ್ಲಿ ಹಂಚಿ ತಾಂಡದಲ್ಲಿ ಅಕ್ರಮ ಕಳ್ಳಬಟ್ಟಿ ಸಾರಾಯಿ ತಯಾರಿಕೆ ಮತ್ತು ಮಾರಾಟ ನಡೆಯುತ್ತಿದೆ ಎಂದು ತಿಳಿಸಿದ್ದು, ಆರೋಪಿತರ ವಿವರ ಕೇಳಲಾಗಿ ಆರೋಪಿಯ ವಿವರನ್ನು ನೀಡಿದ್ದರು. ನಾವು ಘಟನಾ ಸ್ಥಳಕ್ಕೆ ಹೋಗಿ ಅಲ್ಲೆ ಅಕ್ಕ ಪಕ್ಕ ನೋಡಲಾಗಿ ಯಾರು ಗ್ರಾಮಸ್ಥರು ಇರಲಿಲ್ಲ, ಮುಂದುವರೆದು, ರಸ್ತೆಯ ಸಮೀಪ ಹೋಗಿ ಹುಡುಕಾಡಲಾಗಿ ಅಲ್ಲಿದ್ದ ಗ್ರಾಮಸ್ಥರನ್ನು ಪರಿಚಯಿಸಿಕೊಂಡು, ಅವರಿಗೆ ಬಂದ ಮಾಹಿತಿ ತಿಳಿಸಿ, ಪಂಚರಾಗಲು ಕೋರಿದ್ದು, ಅವರು ನಿರಾಕರಿಸಿದ ಮೇರೆಗೆ ನಮ್ಮ ಇಲಾಖಾ ಸಿಬ್ಬಂದಿಗಳಾದ ಚಾಸಾ-2 ಮತ್ತು 3 ರವರನ್ನು ಪಂಚರಾಗಿಸಿಕೊಂಡೆವು. ಘಟನಾ ಸ್ಥಳವನ್ನು ನೋಡಲಾಗಿ, ಅಲ್ಲಿ ಮನೆಯಿದ್ದು, ಅದರ ಬಾಗಿಲು ತೆರೆದಿತ್ತು, ಮನೆಯಲ್ಲಿ ಯಾರಿದ್ದೀರಿ ಎಂದು ಕೂಗಲಾಗಿ ಯಾರೂ ಉತ್ತರಿಸಲಿಲ್ಲ. ನ್ಯಾಯಾಲಯದಿಂದ ಶೋದನೆ ಮಾಡಲು ಅನುಮತಿ ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ ಹಾಗೂ ಸಾಕ್ಷ್ಯ ನಾಶ ಆಗುವ ಸಂಬವ ಇದ್ದುದರಿಂದ ಸ್ಥಳದಲ್ಲಿಯೇ ಕಾನೂನಿನ್ವಯ ಶೋಧಾನ ಸಮುಚಿತ ತಯಾರಿಸಿ, ದಾಳಿ ಮಾಡಿದ್ದು, ಸದರಿ ಮನೆಯ ಮೊದಲನೇ ಕೋಣೆಯ ಎಡಭಾಗದಲ್ಲಿ ಟಿವಿ ಸ್ಟ್ಯಾಂಡ್ ಪಕ್ಕ 4 ಲೀ ಸಾರ್ಮಥ್ಯದ ಬಿಳಿ ಕ್ಯಾನ್ ಕಂಡುಬಂದಿದ್ದು, ಅನುಮಾನಿಸಿ ಅದನ್ನು ತೆಗೆದು ನೋಡಲಾಗಿ, ಅದರಿಂದ ಘಾಟು ವಾಸನೆ ಬಂದಿತ್ತು. ಅದನ್ನು ಪರಿಶೀಲಿಸಲಾಗಿ ಅದು 2 ಲೀ

ನ ಕಳ್ಳಬಟ್ಟಿ ಸಾರಾಯಿ ಎಂದು ಕಂಡುಬಂದಿತ್ತು. ಆರೋಪಿಯ ಕುರಿತು ದಾಖಲೆಗಳನ್ನು ಶೋಧಿಸಲಾಗಿ, ಯಾವುದೇ ದಾಖಲೆ ದೊರಕಿರಲಿಲ್ಲ. ಅಲ್ಲಿ ಇದ್ದ ಗ್ರಾಮಸ್ಥರನ್ನು ಆ ಮನೆಯಲ್ಲಿ ವಾಸವಿರುವರ ಕುರಿತು ವಿಚಾರಿಸಿದ್ದು, ಅಲ್ಲಿ ಆರೋಪಿ ವಾಸವಿರುವುದಾಗಿ ತಿಳಿಸಿದ್ದರು. ಮತ್ತೊಮ್ಮೆ ಗ್ರಾಮಸ್ಥರನ್ನು ಪಂಚರಾಗಲು ಕೋರಿದ್ದು ಅವರು ನಿರಾಕರಿಸಿರುತ್ತಾರೆ. ನಂತರ ಅಲ್ಲಿ ಸಿಕ್ಕ ಎಲ್ಲಾ ಅಭಕಾರಿ ವಸ್ತುಗಳನ್ನು ವಶಕ್ಕೆ ಪಡೆದು, ದೊರೆತ ಎಲ್ಲಾ ಕಳ್ಳಬಟ್ಟಿ ಸಾರಾಯಿಯನ್ನು ರಸಾಯನಿಕ ಪರೀಕ್ಷೆಗೆ ತೆಗೆದು, ಬಟ್ಟೆಯಿಂದ ಸುತ್ತಿ, ಇಲಾಖಾ ಮೊಹರು ಹಾಕಲಾಯಿತು. ಸ್ಥಳದಲ್ಲಿ ಮಾದರಿ ಚೀಟಿ ತಯಾರಿಸಿ, ಪಂಚರ ಸಹಿ ಪಡೆದು ಮುದ್ದೆ ಮಾಲಿಗೆ ಅಂಟಿಸಲಾಯಿತು. ಅದೇ ದಿನ ಸಂಜೆ 4.30 ರಿಂದ 5.30 ರ ವರೆಗೆ ಪಂಚರ ಸಮಕ್ಷಮ ಜರುಗಿಸಲಾಯಿತು. ಸದರಿ ಮಹಜರ್ ಅನ್ನು ಮುದ್ದೆಮಾಲುಗಳನ್ನು ವಶಕ್ಕೆ ಪಡೆದು ಕಛೇರಿಗೆ ಹಿಂದಿರುಗಿ ಪ್ರಕರಣ ದಾಖಲಿಸಿಕೊಂಡು ಚಾಸಾ-7 ರವರಿಗೆ ಮುಂದಿಗೆ ತನಿಖೆಗಾಗಿ ಪ್ರಕರಣವನ್ನು ಹಸ್ತಾಂತರಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ಗುರುತಿಸುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯು ದಾಳಿ ಪಂಚನಾಮೆ ಆಗಿದ್ದು ಅದರ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿಃ 1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ಶೋಧನ ಸಮುಚಿತ ಆಧಾರ ಆಗಿದ್ದು ಅದರ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿಃ 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ದಾಳಿ ಶೋಧನೆ ಮಾಡಿ ಜಪ್ತ ಪಡಿಸಿದ ಸ್ವತ್ತುಗಳ ಪಟ್ಟಿ ಆಗಿದ್ದು ಅದರ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿಃ 3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಮುದ್ದೆ ಮಾಲು ಹಾಗೂ ಸ್ಯಾಂಪಲ್ಗಳ ಮೇಲಿನ ಮಾದರಿಯ ಮೊಹರು ಆಗಿದ್ದು ಅದರ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿಃ 4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 4(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ಪ್ರಥಮ ವರ್ತಮಾನ ವರದಿ ಆಗಿದ್ದು ಅದರ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿಃ 5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಭಾವಾ ಚಿತ್ರ ಘಟನಾ ಸ್ಥಳದಲ್ಲಿ ತೆಗೆದಿದ್ದು ಅದರಲ್ಲಿ ಕಾಣುವ ಒಂದನೇ ವ್ಯಕ್ತಿ ನಾನು ಇರುತ್ತೇನೆ. ಸದರಿ ಛಾಯಾ ಚಿತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಕ್ಯಾನ್ ನ ರಾಸಾಯನಿಕ ಮಾದರಿ ಹೊಂದಿದ್ದ ಹಾಗೂ ಘಟನಾ ದಾಳಿ ಮಾಡಿ ಜಪ್ತ ಪಡಿಸಿಕೊಂಡಿದ್ದ ಅದರ ಮೆಲೆರುವ ಸಹಿ ನನ್ನದು ಇರುತ್ತವೆ. ಅದನ್ನು ಮುದ್ದೆ ಮಾಲು 1 ಎಂದು, ಅದರ ಮೆಲಿರುವ ಸಾಕ್ಷಿಯ ಸಹಿಯನ್ನು ಮು.ಮಾ 1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎ ಸಿ ವೈ ರವರಿಂದಃ-</u>**

ಸಾಗರ ಕಛೇರಿಯಿಂದ ಅಂದಾಜು ಮದ್ಯಾಹ್ನ 3.00 ಗಂಟೆಗೆ ಹೊರಟು ಸೊರಬಕ್ಕೆ ಅಂದಾಜು 3.30 ಗಂಟೆಗೆ ತಲುಪಿರುತ್ತೇನೆ. ಸೊರಬದಿಂದ ಘಟನಾ ಸ್ಥಳಕ್ಕೆ ಇರುವ ಅಂತರ ನನಗೆ ಗೊತ್ತಿಲ್ಲ. ಆದರೆ ಅರ್ಧ ಗಂಟೆಯಲ್ಲಿ ತಲುಪಬಹುದು. ಸುಮಾರು 15 ನಿಮಿಷಗಳ ಕಾಲ ಸದರಿ ಗ್ರಾಮದ ಸುತ್ತ ಮುತ್ತ ಗಸ್ತು ನಿರ್ವಹಿಸಿದ್ದೆವು. ಮಾಹಿತಿ ಬಂದ ತಕ್ಷಣ ಘಟನಾ ಸ್ಥಳಕ್ಕೆ ಹೊರಟಿದ್ದೆವು. ಮಾಹಿತಿ ಬಂದ ಸ್ಥಳದಿಂದ ಮುಖ್ಯ ರಸ್ತೆಗೆ ಸುಮಾರು 10 ನಿಮಿಷ ಅಂತರದಲ್ಲಿತ್ತು. ಗ್ರಾಮಸ್ಥರನ್ನು ಸುಮಾರು 2-3 ನಿಮಿಷಗಳಲ್ಲಿ ವಿಚಾರಿಸಿದೆನು. ಘಟನಾ ಸ್ಥಳವನ್ನು ದಾರಿಯಲ್ಲಿ ಸಿಕ್ಕ ಗ್ರಾಮಸ್ಥರಲ್ಲಿ ವಿಚಾರಿಸಿದ್ದೆ, ಆದರೆ ಅವರು ಈಗ ಯಾರು ಮತ್ತು ಎಲ್ಲಿ ಎಂದು ನೆನಪಿಲ್ಲ. 5 ನಿಮಿಷದಲ್ಲಿ ಆರೋಪಿಯ ಮನೆಯನ್ನು ಒಬ್ಬ ವ್ಯಕ್ತಿ ಹೇಳಿದ್ದನು. ಆರೋಪಿಯ ಮನೆಯ ಮುಂದೆ ಖಾಲಿ ಜಾಗ ಇತ್ತು. ಆರೋಪಿಯ ಮನೆಯ ಅಕ್ಕ ಪಕ್ಕ ಆರೋಪಿಗೆ ಸಂಬಂದಿಸಿದ ಜಾಗ ಇರುವ ಕುರಿತು ನನಗೆ ನೆನಪಿಲ್ಲ. ಆರೋಪಿಯ ಕುರಿತು ಹೇಳಿದ ವ್ಯಕ್ತಿಯು ತನ್ನ ಹೆಸರನ್ನು ಹೇಳಿರಲಿಲ್ಲ. ಶೋಧನಾ ವಾರೆಂಟ್ ಅನ್ನು ಸುಮಾರು 4.30 ಗಂಟೆಗೆ ತಯಾರಿಸಿದ್ದೆನು. ಆರೋಪಿಯ ಮನೆಯನ್ನು ಶೋಧಿಸಲು ಸುಮಾರು 15-20 ನಿಮಿಷ ಆಗಿರುತ್ತದೆ. ಇದೆಲ್ಲಾ ಆದ ಮೇಲೆ ಮಹಜರ್ ಅನ್ನು ಬರೆದಿರುತ್ತೇನೆ. ಆರೋಪಿಯ ಮನೆಯಲ್ಲಿ 3 ರಿಂದ 4 ಕೊಣೆ ಇರಬಹುದು. ಮನೆಯ ಹಿಂಬಾಗಿಲು ಇರುವ ಕುರಿತು ನನಗೆ ನೆನಪಿಲ್ಲ.

ಪ್ಲಾಸ್ಟಿಕ್ ಕ್ಯಾನ್ ಎಂದರೆ ಕೈಯಲ್ಲಿ ಹಿಡಿಯಲು ಹಿಡಿಕೆ ಮತ್ತು ಮುಚ್ಚಳ ಇರುತ್ತದೆ ಎಂದರೆ ಸರಿ. ಮುದ್ದೆಮಾಲು 1 ಆ ರೀತಿ ಇರದೇ ಇರುವುದರಿಂದ ಕ್ಯಾನ್ ಎನ್ನಲು ಬರುವುದಿಲ್ಲ ಎಂದರೆ ಸರಿಯಲ್ಲ. ಅದು ಬಿಳಿ ಬಣ್ಣದ ಕ್ಯಾಲ್ಲ ಅಲ್ಲ ಎಂದರೆ ಸರಿಯಲ್ಲ. ನಾನು ಸ್ವ ಜ್ಞಾನದಿಂದ ಮುದ್ದೆಮಾಲು 1, 4 ಲೀಟರ್ ಸಾರ್ಮರ್ಥ್ಯದ್ದು ಎಂದು ಬರೆದಿರುತ್ತೇನೆ.

ಆರೋಪಿಗೆ ಸಂಬಂದಿಸಿದ ಮಾಲೀಕತ್ವದ ಕುರಿತು ಟಿ ವಿ ಸ್ಟ್ಯಾಂಡ್ ಮತ್ತು ಕೊಣೆಗಳಲ್ಲಿ ಶೋದಿಸಿದೆವು. ಸುಮಾರು 4-5 ಜನ ಗ್ರಾಮಸ್ಥರು ನೆರದಿದ್ದರು. ಈ ಬಗ್ಗೆ ಛಾಯಾಚಿತ್ರ ತೆಗೆದಿರುವುದಿಲ್ಲ. ಅವರು ತಮ್ಮ ಹೆಸರನ್ನೂ ಸಹ ಹೇಳಿರಲಿಲ್ಲ. ನಾನು ಘಟನೆಯ ದಿನ ಸೊರಬಕ್ಕೆ ಬರದೇ ಇದ್ದರೂ, ಗಸ್ತು ಮಾಡಿ, ಘಟನಾ ಸ್ಥಳವನ್ನು ಪರಿಶೀಲಿಸಿ, ಯಾವುದೇ ಮುದ್ದೆಮಾಲನ್ನು ಜಪ್ತಿ ಪಡಿಸಿ, ಮಹಜರ್ ಅನ್ನು ಜರುಗಿಸದೇ ಇದ್ದರೂ, ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಹಾಗೂ ಆರೋಪಿಗೆ ಯಾವುದೇ ರೀತಿಯ ಸಂಬಂದ ಇರದೆ ಇದ್ದರೂ, ಆರೋಪಿಯನ್ನು ನಾನು ನನ್ನ ಸಮಕ್ಷಮ ವಿಚಾರಣೆಗೆ ಕರೆಸಿರಿದ ಕಾರಣ ಹಾಗೂ ಆರೋಪಿಯನ್ನು ನಾನು ನೋಡದೇ ಇದ್ದರೂ, ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲುಲ ಮಾಡಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

1 ನೇ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು, ಸೊರಬ.